
ಎನ್ನುತ್ತ ಇನ್ನೊಂದು ಒಳದ ಕತ್ತಲನ್ನು ಹೊಕ್ಕಳು. ಮರಳಿ ಬಂದು, "ನೀನು ಸೋಜ ಬಪ್ಪಂವಲ್ಲ; ಹಾವಳಿ ಚಿನ್ನಕ್ಕಿಗೆ ಕರೆಯಲೆ ಬಂದಿದ್ದ; ಈಗ ಕರ್ಕಂಡೇ ಬಾ ಹೇಳಿ ನಿನ್ನ ಅಕ್ಕು ಕಳ್ಸಿದ್ದು; ದತ್ತುನ ಒಬ್ಬನೆ ಬಿಟ್ರೆ ಗಟಾರದಲ್ಲಿ ಬಿದ್ದು ಹೋಗ್ತಾ; ಈ ಅವಸ್ಥೇಲಿ ಬತ್ನಿಲ್ಲೆ" ಎಂದಳು. ಓಡಲಾರದೆ ಮಾತಾಡಲಾರದೆ ನಿಂತಲ್ಲಿ ನಿಲ್ಲಲಾರದೆ ಅನಂತ ಸಂಕಟದಿಂದ ಚಡಪಡಿಸಿದ. ಗೋಡೆಯ ಮೇಲೆ ಒರಲೆ ಸುರಂಗಗಳಿದ್ದವು; ಒಲೆ ಮೂಲೆಯಲ್ಲಿ ಹುತ್ತದ ಕೋಡು ಕಾಣಿಸಿತು; ಮೂಲೆ ಕಂಬವನ್ನು ಒಳಗಿನಿಂದಲೆ ತಿಂದು ಪೋಕಳ ಮಾಡಿದ್ದವು; ಸಲೀಲತ್ತೆಯನ್ನು ಹುಡುಕುತ್ತ ಅನಂತ ಒಳ ಜಗಲಿಗೆ ಬಂದ; ಪ್ರತಿ ಹೆಜ್ಜೆಗೂ ನಾಗೊಂದಿಗೆಯೊ ಪಕಾಸಿಗೊ ಕಟ್ಟಿದ ಒರಲೆ ಗೂಡುಗಳು ರಪ್ಪೆಂದು ಕಂಪಿಸಿದವು. ಸಲೀಲತ್ತೆ ಗೋಡೆ ಕಪಾಟನ್ನು ತೆರೆದು ಒರಲೆ ಮಣ್ಣನ್ನು ಗುಡಿಸಿ ಮೊರದಲ್ಲಿ ತುಂಬಿದ್ದಳು; ಹುಡಿ ಮಣ್ಣಿಂದ ಬಿಳಿ ಒರಲೆ ಹುಳುಗಳು ಅತ್ತಿತ್ತ ಹರಿದಾಡಿದವು; "ಮನೆ ತಿಂದು ಹಾಕಿದ್ವೊ... ಇಲ್ನೋಡು" ಎನ್ನುತ್ತ ಒಸಗೆಗೆ ಉಡುವ ಸೀರೆಯನ್ನು ಕೊಡವಿದಳು; ಹುಳಗಳು ಪುರುಪುರುನೆ ಉದುರಿದವು; ಸೀರೆಯ ಅರ್ಧಕರ್ಧ ಭಾಗವನ್ನು ತಿಂದು ಮುಗಿಸಿದ್ದವು; "ಇಂದು ಒಂದು ಬದಿಗೆ ಗುಡಿಸಿದ್ರೆ ನಾಳೆ ಇನ್ನೊಂದು ಕಡೆ ಹಾಜರ್" ಅಲವತ್ತುಕೊಂಡಳು. ಕಸಬರಿಗೆ ಹಿಡಿ ಮುಂಡಿನಿಂದ ಚಿಟ್ಟೆ ಗೋಡೆ ಗುದ್ದಿದಳು; ಹೊರ ಪದರು ಉದುರಿ ಗೋಡೆಯ ಒಳಗೆ ಮನೆಮಾಡಿದ ಅಸಂಖ್ಯ ಹುಳುಗಳು ಮಿಜಿಗುಡುತ್ತಿದ್ದವು. "ಅತ್ತೆ ದೊಡ್ಡ ಮಳೇಲಿ ಕೋಳು ಕುಸಿಯೋದು ಗ್ಯಾರಂಟಿ; ಬಾ ಹೋಗ್ವಾ" ಒತ್ತಾಯಿಸಿದ. "ಇಲ್ಯೊ ಶಣಾ; ಹ್ಯಾಂಗೆ ಬರ್ಲಿ" ಎಂದು ಅಲವತ್ತುಕೊಂಡಳು. ಅನಂತ ಹೊರಗೆ ಬಂದ. ತೆಂಗಿನ ಗರಿಗಳ ಜಾಳು ಸಂದಿಗಳಲ್ಲಿ ಹರಿದ ಅಂಚಿನ ನಕಾಶೆಯಂತಹ ಮೋಡ ದಾರಿ ತಪ್ಪಿ ನಿಂತಿತ್ತು; ತಿಳಿನೀಲಿ ಮತ್ತು ನಸುಗೆಂಪಿನ ಮೋಡದ ಅಂಚಿನಿಂದ ಬೆಳ್ಳಿ ರಸಪಾಕವಾಗಿ ಫಳ ಫಳ ಹೊಳೆಯುತ್ತ ಕುದಿಯುತ್ತಿರುವ ಸಮುದ್ರಕ್ಕೆ ಧುಮುಕಿದ ಬಿಸಿಲು ಟಿಸಿಲುಗಳ ಜಲಪಾತ; ಮೂರು ಸಲ ಪಟಪಟ ಸದ್ದು ಮಾಡಿದ ಮಳೆಯನ್ನು ಗಮಂಡಿ ಗಾಳಿ ಅಘನಾಶಿನಿ ದಾಟಿ ಮಿರ್ಜಾನಿನತ್ತ ಓಡಿಸಿಕೊಂಡು ಹೋಯಿತು. ಮಣ್ಣಿನ ವಾಸನೆ ಎಬ್ಬಿಸಲೆಂದೇ ಮಳೆ ತುಂಡುಗುಪ್ಪು ಹಾಕಿದಂತಿತ್ತು; ಗದ್ದೆ ಬಯಲಿಗೆ ಬಾಯಾರಿಕೆ ದಾಹ ಹೆಚ್ಚಿತು; ಸೆಖೆ ಉರಿಗೆ ಬೆವರು ಜಿನುಗಿತು.



ಅವೇ ಹಳೆಯ ಹಣಜಿಗಳು; ಗರಿಕೆ ಹುಲ್ಲಿನ ಚಿರೆಗಲ್ಲಿನ ಪಾಗಾರಗಳು; ಹೊರ ಚಾಚಿದ ದಾಸವಾಳ ರೆಂಬೆಗಳು; ಮಾಸಿದ ಹಂಚಿನ ನೆರಳಿನ ತೇಪೆಯ ಸಪಾಟು ಮಾಡಿನ ಮನೆಗಳು; ಆಗಾಗ ಕೇಳುವ ದೇವಸ್ಥಾನದ ಗಂಟೆಯ ತರಂಗ; ಬಚ್ಚಲ ಬಸಳೆ ಚಪ್ಪರದಾಚೆ ಚೆಲ್ಲಿದ ಬಳಚಿನ ಓಡುಗಳು; ಸಗಣಿ ಸಾರಿಸಿದ ಅಂಗಳದಲ್ಲಿ ಡೊಂಕು ತೆಂಗಿನ ಮರದ ಬುಡದಲ್ಲಿ ಹತ್ತಿ ನೆಣೆಬತ್ತಿಯ ಸರ ಸುತ್ತಿದ ತುಳಸಿ ಪೀಠ; ಅದರ ಎದುರು ನಾಯಿ ಮಲಗಿದ ಚಾಪೆಯ ಮೇಲೆ ಒಣಗಲು ಹರಗಿದ ಗೇರುಬೀಜ; ಎತ್ತರದ ಮುದಿ ಮಾವಿನ ಮರಗಳ ಬೃಹತ್ ಬಾಹುಗಳು; ಸಾಲು ಇರುವೆಗಳ ಪುಂಡಲೀಕನ ಮಣ್ಣಿನ ಕಟ್ಟೆಯ ಮಡ್ಲು ತಟ್ಟಿ ಚಾದಂಗಡಿ; ಹೆಗಡೆ ಬಸ್ಸಿಗೆ ಕತ್ರಿಯಲ್ಲಿ ಕಾದು ನಿಂತ ಜನ; ಗೇಟಿನ